(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ಅಸಲು ದಾವೆ ನಂ.137/2016

**ದಿನಾಂಕಃ 11-02-2025, ಪಿ ಡಬ್ಲ್ಯೂ-1**

**ಪಾಟೀ ಸವಾಲುಃ ಶ್ರೀ ಎಸ್ ಪಿ ಜೆ ವಕೀಲರಿಂದಃ**

ಡಿ ಎಸ್ ಪ್ರಕಾಶ್ ರವರನ್ನು 1982 ರಲ್ಲಿ ನಾನು ನೋಡಿದ್ದೇನೆ. ಅವರಿಗೆ ಕೆಲಸ ಸಿಕ್ಕಿದ ನಂತರ ಬೆಂಗಳೂರಿಗೆ ಹೋಗಿದ್ದು, ಅವರನ್ನು ಇತ್ತೀಚೆಗೆ ನೋಡಿಲ್ಲ. 1982 ರಿಂದ ನಾನು ಇತ್ತೀಚೆಗೆ ಡಿ ಎಸ್ ಪ್ರಕಾಶ್ ರವರನ್ನು ನೋಡಿಲ್ಲ ಎಂದರೆ ಸಾಕ್ಷಿಯು ಅವರಿಗೆ ಕೆಲಸ ಸಿಕ್ಕಿದ ನಂತರ ನೋಡಿಲ್ಲ ಎಂದು ನುಡಿಯುತ್ತಾರೆ. ಡಿ ಎಸ್ ಪ್ರಕಾಶ್ ರವರಿಗೆ ಏನು ಕೆಲಸ ಸಿಕ್ಕಿತು ಎಂದು ನನಗೆ ಗೊತ್ತಿಲ್ಲ. ಡಿ ಎಸ್ ಪ್ರಕಾಶ್ ರವರು 2007 ರಲ್ಲಿ ಮೌತಿಯಾಗಿದ್ದಾರೆ.

ದಾವಾ ಆಸ್ತಿ ಡಿ ಎಸ್ ಪ್ರಕಾಶ್ ರವರು ಮೌತಿಯಾಗುವವರೆಗೂ ಅವರ ಸ್ವಾಧೀನದಲ್ಲಿ ಇತ್ತಾ ಎಂದರೆ ಸಾಕ್ಷಿಯು 1982 ರಲ್ಲಿ ಕ್ರಯದ ಕರಾರು ಪತ್ರ ಬರೆದುಕೊಟ್ಟ ದಿನಾಂಕದಿಂದ ನನ್ನ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ . ದಿಃ 18-04-2006 ರಂದು ನಾನು ಪ್ರತಿವಾದಿಯರಿಗೆ ನನ್ನ ವಕೀಲರ ಮೂಲಕ ನೋಟೀಸು ನೀಡಿದ್ದೇನೆ ಎಂದರೆ ಸರಿ. ದಿಃ 02-06-2009 ರಂದು 1ನೇ ಪ್ರತಿವಾದಿ ದಾವಾ ಆಸ್ತಿಯನ್ನು ಉಸ್ತುವಾರಿ ಮಾಡಲು ಸಾಧ್ಯವಾಗದ ಕಾರಣ ನನಗೆ ಕಾನೂನುಬದ್ಧ ಅಧಿಕಾರ ಪತ್ರ ನೀಡಿ ಸ್ವಾಧೀನ ವಹಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯ ಅಧಿಕಾರ ಪತ್ರದ ಮೂಲಕ ನಾನು 1ನೇ ಪ್ರತಿವಾದಿಯಿಂದ ದಾವಾ ಆಸ್ತಿಯ ಸ್ವಾಧೀನವನ್ನು ಪಡೆದಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿಲ್ಲ. ಪ್ರತಿವಾದಿಯರು ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಇರಬಹುದು. ದಿಃ 02-06-2009 ರಂದು ನನಗೆ ಬರೆದುಕೊಟ್ಟಿದ್ದ ಸಾಮಾನ್ಯ ಅಧಿಕಾರ ಪತ್ರವನ್ನು ರದ್ದು ಪಡಿಸಿದ್ದೇನೆ ಎಂದು 1ನೇ ಪ್ರತಿವಾದಿ ನನಗೆ ಪ್ರತ್ಯುತ್ತರ ನೋಟೀಸು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ನೋಟೀಸನ್ನು ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿಃ 23-04-216 ರಂದು ಪ್ರತಿವಾದಿಯರು ನನ್ನ ವಕೀಲರಿಗೆ ಮರು ಉತ್ತರ ನೋಟೀಸು ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಮಾನ್ಯ ಅಧಿಕಾರ ಪತ್ರವನ್ನು ರದ್ದು ಪಡಿಸಿದ ನಂತರವೂ ನಾನು ದಾವಾ ಆಸ್ತಿಯ ಸ್ವಾಧೀನವನ್ನು ಮುಂದುವರೆಸುತ್ತೇನೆ ಎಂದು ಪ್ರತಿವಾದಿಯರ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸಾಕ್ಷಿಯು ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನಕ್ಕೆ ಎಂದೂ ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನ ವಿರುದ್ಧ 1ನೇ ಪ್ರತಿವಾದಿ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಪೋಲಿಸ್ ಠಾಣೆಯಲ್ಲಿ ನನಗೆ ದಾವಾ ಆಸ್ತಿಯ ಸ್ವಾಧೀನಕ್ಕೆ ತಂಟೆ ತಕರಾರು ಮಾಡಬಾರದೆಂದು ತಿಳುವಳಿಕೆ ನೀಡಿದ್ದು, 1ನೇ ವಾದಿ ಪ್ರತಿವಾದಿಯರ ಸ್ವಾಧೀನಕ್ಕೆ ತಂಟೆ ತಕರಾರು ಮಾಡುವುದಿಲ್ಲ ಎಂದು ಬರೆದುಕೊಟ್ಟರು ಎಂದರೆ ಸರಿಯಲ್ಲ. ಪೋಲಿಸ್ ಠಾಣೆಗೆ 1ನೇ ವಾದಿಯೂ ಸಹಾ ಬಂದಿದ್ದರು ಎಂದರೆ ಸರಿ. ದಾವೆ ತೀರ್ಮಾನವಾಗುವವರೆಗೆ ನಾನು ಮತ್ತು 1 ನೇ ವಾದಿ ಪ್ರತಿವಾದಿಯರ ಸ್ವಾದೀನಕ್ಕೆ ತಂಟೆ ತಕರಾರು ಮಾಡಬಾರೆಂದು ತೀರ್ಮಾನವಾಯಿತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1ನೇ ಪ್ರತಿವಾದಿ ಬೆಂಗಳೂರಿನಲ್ಲಿ ಇರುವುದರಿಂದ ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಮುಂದುವರೆಯಲ್ಲಿ ಎಂದು ಪೋಲೀಸರು ಹೇಳಿದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿ ನನಗೂ ಸೇರಬೇಕು ಎಂದು ಹೊನವಳ್ಳಿ ಗೌಡ ಎಂಬುವವರು ನನ್ನ ಮತ್ತು ಪ್ರತಿವಾದಿಯರ ವಿರುದ್ಧ ದಾವೆ ಹೂಡಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿಯರ ವಿರುದ್ಧ ಹೂಡಿದ್ದಾರೆ, ನನ್ನ ವಿರುದ್ಧ ಹೂಡಿಲ್ಲ ಎಂದು ನುಡಿಯುತ್ತಾರೆ.

1ನೇ ಪ್ರತಿವಾದಿ ನನ್ನ ಮತ್ತು 1ನೇ ವಾದಿಯ ವಿರುದ್ಧ ಹಾಗೂ ಹೊನ್ನವಳ್ಳಿ ಗೌಡ ರವರ ವಿರುದ್ಧ ಒಂದು ದಾವೆಯನ್ನು ಹೂಡಿದ್ದಾರೆ ಎಂದರೆ ಸಾಕ್ಷಿಯು ನನ್ನ ವಿರುದ್ಧ ದಾವೆ ಹೂಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ತಕರಾರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ಸಹಿ ಮತ್ತು 1ನೇ ವಾದಿಯ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ನಾನು ನನ್ನ ತಕರಾರಿನಲ್ಲಿ ಮಾಡಿರುತ್ತೇನೆ. ಸದರಿ ತಕರಾರನ್ನು ನಿಡಿ-1 ಎಂದು ಗುರುತಿಸಲಾಯಿತು.

ದಿಃ 05-10-1982 ರಲ್ಲಿ ಕ್ರಯದ ಕರಾರು ಆಯಿತು ಎನ್ನಲಾದ ಕರಾರು ನನ್ನ ಮತ್ತು 1ನೇ ವಾದಿಯ ತಂದೆ ಹಾಗೂ ಡಿ ಎಸ್ ಪ್ರಕಾಶ್ ರವರ ನಡುವೆ ಆಯಿತು. ಸದರಿ ಕರಾರನ್ನು ಬಿಳಿ ಹಾಳೆಯಲ್ಲಿ ಬರೆದು ಸ್ಟ್ಯಾಂಪ್ ಹಚ್ಚಲಾಯಿತು. ಸದರಿ ಕರಾರು ಪತ್ರವನ್ನು ಡಿ ಎಸ್ ಪ್ರಕಾಶ್ ರವರು ಮಲ್ಲಿನಥಪುರ ಗ್ರಾಮದಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಬರೆದಿರುತ್ತಾರೆ. ಆ ಸಮಯದಲ್ಲಿ ಡಿ ಎಸ್ ಪ್ರಕಾಶ್ ರವರ ಸಂಬಂದಿಕರಾದ ಲಕ್ಷ್ಮೀಪತಯ್ಯ, ಕಟ್ಟೇಪುರದ ಅಪ್ಪಾಜಿಗೌಡರು, ಕಾಳರಸೇಗೌಡ, ಅಜ್ಜೇಗೌಡ, ತಿಮ್ಮೇಗೌಡ ರವರು ಹಾಜರಿದ್ದರು. ಅಪ್ಪಾಜಿಗೌಡರು, ಕಾಳರಸೇಗೌಡ, ಅಜ್ಜೇಗೌಡ, ತಿಮ್ಮೇಗೌಡ ರವರ ತಂದೆಯ ಹೆಸರುಗಳು ನನಗೆ ನೆನಪಿಲ್ಲ. ಅಜ್ಜೇಗೌಡ, ತಿಮ್ಮೇಗೌಡ ರವರು ಜೀವಂತ ಇದ್ದಾರೆ. ಅಪ್ಪಾಜಿಗೌಡರು, ಕಾಳರಸೇಗೌಡ ರವರುಗಳು ಮೃತರಾಗಿರುತ್ತಾರೆ. ಮೇಲೆ ಹೇಳಿದ ವ್ಯಕ್ತಿಗಳು ಯಾವ ಊರಿನವರು ಎಂದು ಕ್ರಯದಕರಾರು ಪತ್ರದಲ್ಲಿ ಬರೆಯಲಾಗಿದೆಯೇ ಅಥವಾ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಡಿ ಎಸ್ ಪ್ರಕಾಶ್ ರವರು ಕರಾರು ಪತ್ರದಲ್ಲಿ ಎರಡು ಕಡೆ ಸಹಿಗಳನ್ನು ಮಾಡಿದ್ದಾರೆ. ಒಂದು ಸಹಿ ಸ್ಟ್ಯಾಂಪ್ ನ ಮೇಲೆ ಮತ್ತೊಂದು ಸಹಿ ಬಿಕ್ಲಮ್ ನಲ್ಲಿ ಸಹಿ ಮಾಡಿದ್ದಾರೆ.

ಕರಾರು ಪತ್ರದಲ್ಲಿ ದಾವಾ ಆಸ್ತಿಯ ಚೆಕ್ಕುಬಂದಿ ಬರೆಯಲಾಗಿದೆ. ಕ್ರಯದ ಕರಾರು ಪತ್ರದ ಪೂರ್ವ ದಿಕ್ಕಿನಲ್ಲಿ ಪುಟೇಲಮ್ಮ, ಕರಿಯಯ್ಯ ರವರ ಜಮೀನು, ಪಶ್ಚಿಮಕ್ಕೆ ಅಜ್ಜೇಗೌಡರ ಜಮೀನು ಮತ್ತು ಮಂಟಿ ಜಮೀನು, ದಕ್ಷಿಣಕ್ಕೆ ಕಾಳಯ್ಯ ರವರ ಜಮೀನು ಮತ್ತು ಮಂಟಿ ಜಮೀನು, ಉತ್ತರಕ್ಕೆ ಚೆಲುವೇಗೌಡರ ಜಮೀನು ಮತ್ತು ರಾಜೇಗೌಡರ ಜಮೀನು ಇರುತ್ತದೆ. ನಾನು ಈಗ ಹೇಳಿದಂತೆ ಚೆಕ್ಕುಬಂದಿ ಕ್ರಯದ ಕರಾರು ಪತ್ರದಲ್ಲಿ ಇಲ್ಲ. ದಾವಾ ಆಸ್ತಿ ಹಾಗೂ ಕ್ರಯದ ಕರಾರು ಪತ್ರದಲ್ಲಿ ನಮೂದಿಸಲಾದ ಆಸ್ತಿಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಚೆಕ್ಕುಬಂದಿಯೊಳಗೆ ಬರುವ ಆಸ್ತಿಗೆ ಕ್ರಯದ ಕರಾರು ಪತ್ರ ಆಗಿಲ್ಲ, ನಿಪಿ-13 ರಲ್ಲಿ ನಮೂದಿಸಿರುವ ಆಸ್ತಿಗೆ ಕ್ರಯದ ಕರಾರು ಪತ್ರ ಆಗಿದೆ. ಮೇಲೆ ಹೇಳಿದ ಚೆಕ್ಕುಬಂದಿ ಒಳಗೆ ಬರುವ ಆಸ್ತಿಗೆ ಹೊನ್ನವಳ್ಳಿಗೌಡ ಹಾಗೂ 1ನೇ ಪ್ರತಿವಾದಿ ಹೂಡಿರುವ ದಾವೆಗಳು ನಡೆಯುತ್ತಿವೆ ಎಂದರೆ ಸಾಕ್ಷಿಯು ನಿಪಿ-13 ರಲ್ಲಿ ನಮೂದಿಸಿರುವ ಆಸ್ತಿಗೆ ದಾವೆಗಳು ನಡೆಯುತ್ತಿವೆ ಎಂದು ನುಡಿಯುತ್ತಾರೆ.

ಹೊನ್ನವಳ್ಳಿಗೌಡ ಮತ್ತು 1ನೇ ಪ್ರತಿವಾದಿ ನನ್ನ ವಿರುದ್ಧ ಸಲ್ಲಿಸಿರುವ ದಾವೆಗಳಲ್ಲಿ ನಾನು ನನ್ನ ವಕೀಲರಿಗೆ ಆಸ್ತಿಯ ಚೆಕ್ಕುಬಂದಿಯನ್ನು ಹೇಳಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-13 ರಲ್ಲಿ ನಮೂದಿಸಿರುವ ಪೂರ್ವಕ್ಕೆ ಇರುವ ತಮ್ಮೇಗೌಡರ ಜಮೀನಿನ ಪಕ್ಕ ರಾಜೇಗೌಡರ ಜಮೀನು ಇದೆ. ತಮ್ಮೇಗೌಡರು ಈಗ ಬದುಕಿಲ್ಲ. ತಮ್ಮೇಗೌಡರ ಬದಲಿಗೆ ವೀರಾಚಾರ್ ರವರು ಸ್ವಾಧೀನದಲ್ಲಿದಾರೆ. ನಿಪಿ-13 ರಲ್ಲಿ ನಮೂದಿಸಿರುವ ಪಶ್ಚಿಮಕ್ಕೆ ಇರುವ ಕೃಷ್ಣಮೂರ್ತಿ ರವರು ಅವರ ಆಸ್ತಿಯನ್ನು ಟಿ ಎಸ್ ನಾಗರಾಜು ರವರಿಗೆ ಮಾರಾಟ ಮಾಡಿದ್ದರೆ, ಹಾಗೂ5 ಎಕರೆ ಜಮೀನಿನ ಪೈಕಿ ಒಂದು ಎಕರೆ ಜಮೀನನ್ನು ಅಜ್ಜೇಗೌಡರಿಗೆ ಮಾರಾಟ ಮಾಡಿದ್ದು, ಟಿ ಎಸ್ ನಾಗರಾಜು ರವರು ಅಜ್ಜೇಗೌಡರು ಸ್ವಾಧೀನದಲ್ಲಿ ಇದ್ದಾರೆ. ನಿಪಿ-13 ರಲ್ಲಿ ನಮೂದಿಸಿರುವ ದಕ್ಷಿಣಕ್ಕೆ ಈಗಲೂ ಮರಟಿ ಜಮೀನು ಇದೆ. ಹಾಗೂ ಉತ್ತರ ದಿಕ್ಕಿಗೆ ಈಗಲೂ ಚಲುವೇಗೌಡರ

ಮಕ್ಕಳು ಸ್ವಾಧೀನದಲ್ಲಿದ್ದಾರೆ. ಚೆಕ್ಕುಬಂದಿ ಬದಲಾವಣೆಯಾದ ವಿಚಾರವನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿಲ್ಲ.

ನಿಪಿ-13 ಆದ ನಂತರ ದಾವಾ ಆಸ್ತಿಯ ಕ್ರಯ ಪತ್ರವನ್ನು ಬರೆದುಕೊಡುವಂತೆ ನಾನು ಡಿ ಎಸ್ ಪ್ರಕಾಶ್ ರವರ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡಿಲ್ಲ. ಕ್ರಯ ಪತ್ರವನ್ನು ಬರೆದುಕೊಡುವಂತೆ ನಾನು ಡಿ ಎಸ್ ಪ್ರಕಾಶ್ ರವರಿಗೆ ನನ್ನ ವಕೀಲರ ಮೂಲಕ ನೋಟೀಸು ಕೊಟ್ಟಿಲ್ಲ. ನನಗೆ ಆ ರೀತಿ ನೋಟೀಸು ಕೊಡಲು ತೊಂದರೆ ಇರಲಿಲ್ಲ. 1ನೇ ವಾದಿ ಕುಳ್ಳೇಗೌಡರ ಮಗ ಎಂದರೆ ಸರಿ. ಅವರಿಗೂ ಸಹ ನೋಟೀಸು ಕೊಡಲು ತೊಂದರೆ ಇರಲಿಲ್ಲ. 2009 ರಲ್ಲಿ ಸಾಮಾನ್ಯ ಅಧಿಕಾರ ಪತ್ರವನ್ನು 1ನೇ ಪ್ರತಿವಾದಿ ಮಾಡಿಕೊಡುವಾಗಲೂ ಸಹಾ ನಾನು ವಕೀಲರ ಮೂಲಕ ಕ್ರಯ ಪತ್ರವನ್ನು ಬರೆದುಕೊಡುವಂತೆ ನೋಟೀಸು ಕೊಟ್ಟಿಲ್ಲ. 1982 ರಿಂದ 2009 ರ ನಡುವೆ ನಾನು ವಕೀಲರ ಅಬಿಪ್ರಾಯವನ್ನು ಪಡೆದುಕೊಂಡಿಲ್ಲ. ನಿಪಿ13 ರಲ್ಲಿ ಏನು ಬರೆದಿದೆ ಎಂದು ನಾನು ಈ ಮರೆತುಕೊಂಡಿದ್ದೇನೆ. ನಿಪಿ-13 ರಲ್ಲಿ ಏನು ಬರೆದಿದೆ ಎಂದು ನಾನು ನನ್ನ ವಕೀಲರನ್ನು ಕೇಳಿ ತಿಳಿದುಕೊಂಡಿಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ.ಸ. ಇದೆ.

**(ರಘು ಎಂ.)**
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ**
**ಅರಕಲಗೂಡು.**

®